**OS No. 36/2016**
**DW-1**

ದಿನಾಂಕಃ 08-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ. ಕೆ ಎಸ್ ಎಸ್ ವಕೀಲರಿಂದ.

ನಿಪಿ-**10** ರಲ್ಲಿ ನನ್ನ ಮತ್ತು ವಾದಿಯ ಮನೆಯ ನಡುವೆ ಗಲ್ಲಿ ನಮೂದು ಆಗಿದೆ ಎಂದರೆ ಸರಿ. ನಿಡಿ-**6** ರಲ್ಲೂ ಸಹ ಗಲ್ಲಿ ನಮೂದು ಆಗಿದೆ ಎಂದರೆ ಸರಿ. ವಾದಿಯವರು ಈ ಹಿಂದೆ ಇದ್ದ ಹಳೆಯ ಮನೆಯ ಉತ್ತರಕ್ಕೆ ವಾದಿಯವರು ಹೊಸ ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸರಿ. ವಾದಿಯವರ ಮನೆಯ ಉತ್ತರಕ್ಕೆ ಮೊದಲು ಖಾಲಿ ನಿವೇಶನ ಇತ್ತು, ಈಗ ಮನೆ ಇರುತ್ತದೆ. ವಾದಿಗಳು ಸದರಿ ಮನೆಯನ್ನು ಸುಮಾರು **7-8** ವರ್ಷಗಳ ಹಿಂದೆ ನಿರ್ಮಿಸಿರುತ್ತಾರೆ. ನಿಪಿ-**16** ಮತ್ತು **17** ರಲ್ಲಿ ಕಾಣುವಂತೆ **3** ಅಡಿ ಅಗಲ ಮತ್ತು **7** ಅಡಿ ಎತ್ತರದ ಒಂದು ಗೋಡೆಯನ್ನು ನಮ್ಮ ಮತ್ತು ವಾದಿಗಳ ಮನೆಯ ನಡುವಿನ ಗಲ್ಲಿಯಲ್ಲಿ ನಿರ್ಮಿಸಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಸದರಿ ಗೋಡೆಯನ್ನು ನನ್ನ ಜಾಗದಲ್ಲಿ ನಿರ್ಮಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಗೋಡೆಯನ್ನು ನಾವು ಸಲ್ಲಿಸಿದ್ದ ಕಚ್ಚಾ ನಕಾಶೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಗೋಡೆಯನ್ನು ಈ ದಾವೆ ಸಲ್ಲಿಸಿದ ನಂತರ ನ್ಯಾಯಾಲಯದ ನಿರ್ಬಂಧ ಕಾಜ್ಞೆಯನ್ನು ಉಲ್ಲಂಘಿಸಿ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಾನು ಹೇಳಿದಂತೆ ಯಾವುದೇ ಗೋಡೆಯನ್ನು ನಿರ್ಮಿಸದೇ ಇರುವುದರಿಂದ ಸದರಿ ಗೋಡೆಯನ್ನು ನಮ್ಮ ಕಚ್ಚಾ ನಕಾಶೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ನಾವು ಗಲ್ಲಿಯನ್ನು ಸೇರಿಸಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳು ಹಿಂದಿನಿಂದಲೂ ಸಹ ದನ ಕರುಗಳನ್ನು ಸಾಕಾಣಿಕೆ ಮಾಡುತ್ತಿದ್ದಾರೆ ಎಂದರೆ, ಸಾಕ್ಷಿದಾರರು ಈ ಹಿಂದೆ ಇರಲಿಲ್ಲ, ಈಗ ಸಾಕಾಣಿಕೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳು ಬಹಳ ಹಿಂದಿನಿಂದಲೂ ದನಕರುಗಳನ್ನು ಸಾಕುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಖರೀದಿ ಮಾಡಿದ್ದ ನಿವೇಶನದಲ್ಲಿ **7½** ಅಡಿ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಿರುತ್ತೇವೆ. ನಿಡಿ-**4** ರ ಕ್ರಯ ಪತ್ರದ ಚೆಕ್ಕು ಬಂದಿಯ ಪೂರ್ವಕ್ಕೆ ಗಲ್ಲಿ ಎಂದು ನಮೂದು ಆಗಿರುತ್ತದೆ. ಸದರಿ ಗಲ್ಲಿಯು **7½** ಅಡಿ ಅಗಲದ ಗಲ್ಲಿಯಾಗಿತ್ತು, ಸಾಕ್ಷಿದಾರರು ಮುಂದುವರೆದು ಸದರಿ ಗಲ್ಲಿಯು ಸಹ ನಾವೇ ಬಿಟ್ಟಿದ್ದೆವು ಎಂದು ನುಡಿಯುತ್ತಾರೆ. ನಿಡಿ-**4** ರಲ್ಲಿ ನಮೂದಾಗಿರುವ ಗೌರಮ್ಮ ರವರು **1** ನೇ ವಾದಿಯ ಅತ್ತೆ ಮತ್ತು **2** ನೇ ವಾದಿಯ ತಾಯಿ ಎಂದರೆ ಸರಿ. ಸದರಿ ಗೌರಮ್ಮರವರು **7½** ಅಡಿ ಗಲ್ಲಿಯನ್ನು ತಾವೇ ಉಳಿಸಿಕೊಂಡು ಪಶ್ಚಿಮದ ಖಾಲಿ ನಿವೇಶನವನ್ನು ನಮಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ **2005** ರಲ್ಲಿ ಯಾವುದೇ ರೀತಿಯಲ್ಲಿ ನಲ್ಲಿಯನ್ನು ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ನಲ್ಲಿಯನ್ನು ಅಳವಡಿಸಿಕೊಂಡ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯ ಮನೆಯ ನಡುವಿನ ಗಲ್ಲಿಯಲ್ಲಿ ತೊಟ್ಟಿ ಕಟ್ಟಿಸಿ ನಲ್ಲಿ ನಿರ್ಮಾಣ ಮಾಡಿದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಬೇಕಾಯಿತು ಎಂದರೆ

ಸರಿಯಲ್ಲ. ಸದರಿ ಗೋಡೆಯು ಅಪೂರ್ಣವಾಗಿದೆ ಎಂದರೆ ಸರಿ. ವಾದಿಯವರು ನ್ಯಾಯಾಲಯದ ಮುಂದೆ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಸದರಿ ಗೋಡೆಯನ್ನು ಅರ್ಧಕ್ಕೆ ನಿಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಗಲ್ಲಿಯಲ್ಲಿ ಗೋಡೆಯನ್ನು ನಿರ್ಮಿಸಲು ಪಂಚಾಯತಿಯಿಂದ ಪರವಾನಗಿ ಪಡೆದಿರುತ್ತೇವೆ. ಸದರಿ ಪರವಾನಗಿಯನ್ನು ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಯಾವುದೇ ಪರವಾನಗಿ ಪಡೆಯದೆ ಅಕ್ರಮವಾಗಿ ಸದರಿ ಗೋಡೆಯನ್ನು ನಿರ್ಮಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಸೇರಿರುವ ಗಲ್ಲಿಯನ್ನು ಕಬಳಿಸುವ ಉದ್ದೇಶದಿಂದ ಸದರಿ ಗಲ್ಲಿಯಲ್ಲಿ ಗೋಡೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ತಿ.ನರಸೀಪುರ